# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 507(603) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.08.2025 |
| ಉತ್ತರಿಸುವ ಸಚಿವರು | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದಲ್ಲಿ ಉದ್ದೇಶಿಸಿರುವ ರೋಪ್-ವೇ ನಿರ್ಮಾಣ ಯೋಜನೆಯು ಯಾವ ಹಂತದಲ್ಲಿದೆ; | ನಂದಿ ಬೆಟ್ಟದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ರೂ.9340.55 ಲಕ್ಷಗಳ ಅಂದಾಜು ವೆಚ್ಚದಲ್ಲಿ 30 ವರ್ಷಗಳ ರಿಯಾಯಿತಿ ಅವಧಿಗೆ ರೋಪ್ ವೇ ಅಳವಡಿಸುವ ಯೋಜನೆಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಆಧಾರದ ಮೇಲೆ ನಂದಿ ಬೆಟ್ಟದಲ್ಲಿ ಪ್ರಯಾಣಿಕರ ರೋಪ್ ವೇಗಳ ಅಭಿವೃದ್ಧಿ ಮತ್ತು ಕಾರ್ಯಾಚರಣೆಗಾಗಿ ಖಾಸಗಿ ಪಾಲುದಾರರ ಆಯ್ಕೆಗೆ ಟೆಂಡರ್ ನ್ನು ಆಹ್ವಾನಿಸಲು ಕೆಟಿಪಿಪಿ ನಿಯಮಗಳನ್ನು ಮತ್ತು ಕನಿಷ್ಠ BIS ಮಾನದಂಡಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಅದರಂತೆ, ರೋಪ್-ವೇ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಿ, ಮ॥ ಡೈನಾಮಿಕ್ಸ್ ರೋಪ್-ವೇ ಪ್ರೈ ಲಿ. ರವರು ಆಯ್ಕೆಯಾಗಿದ್ದು, ಸದರಿ ಸಂಸ್ಥೆಯವರೊಂದಿಗೆ ರಿಯಾಯಿತಿ ಒಡಂಬಡಿಕೆಯಂತೆ Lower Terminal Point (LTP) ನಿರ್ಮಾಣಕ್ಕಾಗಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಮಡಕುಹೊಸಹಳ್ಳಿ ಗ್ರಾಮದ ಸರ್ವೆ ನಂ.28ರ ಪೈಕಿ 1.32 ಎಕರೆ/ಗುಂಟೆ ಜಮೀನನ್ನು ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ಹೆಗ್ಗಡಿಹಳ್ಳಿ ಗ್ರಾಮದ ಸರ್ವೆ ನಂ.94 ರಲ್ಲಿ 5.11 ಎಕರೆ ಒಟ್ಟು 7.00 ಎಕರೆ ಜಮೀನನ್ನು ಹಾಗೂ Upper Terminal Point (UTP) ನಿರ್ಮಾಣಕ್ಕಾಗಿ ನಂದಿ ಗಿರಿಧಾಮದಲ್ಲಿ ತೋಟಗಾರಿಕೆ ಇಲಾಖೆಯ 2.00 ಎಕರೆ ಜಮೀನನ್ನು ಅಂದರೆ ಒಟ್ಟು 9.00 ಎಕರೆ ಜಮೀನನ್ನು ಈ ಯೋಜನೆಯ ರಿಯಾಯಿತಿದಾರರಾದ ಮ॥ ಡೈನಾಮಿಕ್ಸ್ ರೋಪ್-ವೇ ಪ್ರೈ.ಲಿ., ರವರಿಗೆ ಹಸ್ತಾಂತರಿಸಲಾಗಿರುತ್ತದೆ.<br><br>ನಂದಿ ಬೆಟ್ಟ ರೋಪ್-ವೇ ಯೋಜನೆಯ ನಿರ್ಮಾಣಕ್ಕಾಗಿ ಪ್ರವಾಸೋದ್ಯಮ ಇಲಾಖೆ/ ಸರ್ಕಾರಿ/ ಖಾಸಗಿ/ ಅರಣ್ಯ ಇಲಾಖೆ/ ತೋಟಗಾರಿಕೆ ಇಲಾಖೆ ಜಮೀನಿನಲ್ಲಿ ಟವರ್ ಹಾಗೂ ಪಿಲ್ಲರ್‌ಗಳು ಹಾದು ಹೋಗಲಿದ್ದು, ಈಗಾಗಲೇ ಖಾಸಗಿ ಜಮೀನಿನಲ್ಲಿ ಟವರ್ ಅಳವಡಿಸಲು ಭೂಸ್ವಾಧೀನ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಅರಣ್ಯ ಇಲಾಖೆಯ ಜಮೀನಿನಲ್ಲಿ ರೋಪ್-ವೇ ಯೋಜನೆ ಹಾದು ಹೋಗಲಿದ್ದು, Forest Clearance ಗಾಗಿ ಈಗಾಗಲೇ |

| | | |
|---|---|---|
| | | ಅರಣ್ಯ ಇಲಾಖೆಯ Parivesh Portal Website ನಲ್ಲಿ ಸೂಕ್ತ ದಾಖಲೆಗಳನ್ನು Upload ಮಾಡಲಾಗಿರುತ್ತದೆ. ಸದರಿಯವರು ಅನುಮತಿ ನೀಡಿದ ನಂತರ ಯೋಜನೆ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತದೆ. |
| ಆ) | ಈ ಯೋಜನೆಯ ರೂಪುರೇಷೆ ಹಾಗೂ ವಿಸ್ತೃತ ಯೋಜನಾ ವರದಿಯ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು; | ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಈ ಯೋಜನೆಯ ಪರಿಕಲ್ಪನೆಯು ಮುನ್ನಲೆಗೆ ಬಂದಿದ್ದು ಯಾವಾಗ; (ವಿವರ ನೀಡುವುದು) | 2015-16ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-452 ರಲ್ಲಿ ಜಂಟಿ ಸಹಭಾಗಿತ್ವ ಮತ್ತು ಪಿಪಿಪಿ ಮಾದರಿಯಲ್ಲಿ ಬೃಹತ್ ಪ್ರವಾಸೋದ್ಯಮ ಯೋಜನೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂಬುದಾಗಿ ಘೋಷಿಸಲಾಗಿರುತ್ತದೆ.<br>ಸದರಿ ಕಂಡಿಕೆಯಲ್ಲಿ ನಂದಿಬೆಟ್ಟ ಗಿರಿಧಾಮದಲ್ಲಿ ಕೇಬಲ್ ಕಾರ್ ಅಭಿವೃದ್ಧಿ ಯೋಜನೆಯು ಒಳಗೊಂಡಿರುತ್ತದೆ. |
| ಈ) | ನಂದಿ ಬೆಟ್ಟದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಮತ್ತು ಟ್ರಾಫಿಕ್ ಸಮಸ್ಯೆಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಅಲ್ಲಿ ರೋಪ್-ವೇ ನಿರ್ಮಾಣವು ದಿವಂಗತ ಶಂಕರನಾಗ್ ಅವರ ಕನಸಾಗಿದ್ದು ನಿಜವೇ; ನಿಜವಿದ್ದಲ್ಲಿ ಅಂದು ಈ ಯೋಜನೆಯ ಕುರಿತು ಶಂಕರ್‌ನಾಗ್ ಅವರು ಸರ್ಕಾರಕ್ಕೆ ವರದಿ ಸಲ್ಲಿಸಿರುವ ಬಗ್ಗೆ ದಾಖಲೆಗಳಿವೆಯೇ? (ಈ ಕುರಿತು ಮಾಹಿತಿಯನ್ನು ಒದಗಿಸುವುದು) | ಈ ರೀತಿಯ ದಾಖಲೆಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. |

**ಸಂಖ್ಯೆ: ಟಿಓಆರ್ 187 ಟಿಡಿವಿ 2025**

**(ಹೆಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

**ವಿಧಾನಸಭೆಯ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 603ಕ್ಕೆ ಅನುಬಂಧ**

ನಂದಿಗಿರಿಧಾಮವು ಬೆಂಗಳೂರಿನಿಂದ ಕೇವಲ 60 ಕಿ.ಮೀ ದೂರವಿರುವ ಪ್ರವಾಸಿ ತಾಣವಾಗಿದ್ದು, ಬೆಂಗಳೂರಿಗೆ ವಾರಾಂತ್ಯದಲ್ಲಿ ಭೇಟಿ ನೀಡಲು ಅತ್ಯಂತ ಸೂಕ್ತವಾದ ಸ್ಥಳವಾಗಿರುತ್ತದೆ. ನಂದಿ ಗಿರಿಧಾಮದಲ್ಲಿ ಚಾರಿತ್ರಿಕ ಕೋಟೆ ಇದ್ದು, ಹಲವಾರು ದೇವಸ್ಥಾನಗಳು, ಪಾರಂಪರಿಕ ಸ್ಮಾರಕಗಳು ಹಾಗೂ ಆಕರ್ಷಕ ಪರಿಸರವು ಪ್ರಮುಖ ಆಕರ್ಷಣೆಯಾಗಿ ರೂಪಗೊಂಡಿದ್ದು, ಟಿಪ್ಪುಸುಲ್ತಾನನು ಬೇಸಿಗೆಯ ವಾಸ ಸ್ಥಳವಾಗಿ ಬಳಸುತ್ತಿದ್ದ ಬಗ್ಗೆ ಚರಿತ್ರೆಯಲ್ಲಿ ಉಲ್ಲೇಖವಿದೆ. ಈಗಲೂ ಈ ಬಗ್ಗೆ ಹಲವಾರು ಪಾರಂಪರಿಕ ಕುರುಹುಗಳನ್ನು ಈ ಪ್ರದೇಶದಲ್ಲಿ ನೋಡಬಹುದಾಗಿದೆ.

ನಂದಿ ಬೆಟ್ಟವು ಮುಖ್ಯ ರಸ್ತೆಯಿಂದ ಸುಮಾರು 7.60 ಕಿ.ಮೀ ಇದ್ದು ಸಾಮಾನ್ಯವಾಗಿ 15-20 ನಿಮಿಷಗಳಲ್ಲಿ ರಸ್ತೆಯ ಮೂಲಕ ಕ್ರಮಿಸಬಹುದಾಗಿದ್ದು, ಸರಿ ಸುಮಾರು 400 ಮೀಟರ್ ಎತ್ತರದಲ್ಲಿರುವ ಈ ಬೆಟ್ಟವನ್ನು 5-6 ಮೀ ಅಗಲದ ರಸ್ತೆಯನ್ನು ಬಳಸಿ ತಲುಪಬೇಕಾಗಿರುತ್ತದೆ. ನಂದಿ ಬೆಟ್ಟವನ್ನು ಪ್ರವಾಸಿಗರು ಮುಂಜಾನೆ ಸೂರ್ಯೋದಯ ಸಮಯದಲ್ಲಿ ಹಾಗೂ ಸೂರ್ಯಸ್ತ ಸಮಯದಲ್ಲಿ ಭೇಟಿ ನೀಡಲು ಹೆಚ್ಚು ಆಸಕ್ತಿ ಹೊಂದಿದ್ದು, ವಾರಾಂತ್ಯಗಳಲ್ಲಿ ಅತಿ ಹೆಚ್ಚು ಪ್ರವಾಸಿಗರಿಂದ ತುಂಬಿ ಜನ ಜಂಗುಳಿಯನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾಗಿರುತ್ತದೆ. ಪಾರ್ಕಿಂಗ್ ವ್ಯವಸ್ಥೆಗೆ ಸೂಕ್ತ ಸ್ಥಳಾವಕಾಶವಿಲ್ಲದೆ ಈ ಪ್ರವಾಸಿ ತಾಣವನ್ನು ನಿರ್ವಹಿಸುವುದು ತೀರಾ ದುಸ್ಥಿರವಾಗಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು ನಂದಿಬೆಟ್ಟದ ತಪ್ಪಲಿನಿಂದ ಗಿರಿ ಪ್ರದೇಶಕ್ಕೆ ರೋಪ್-ವೇ ಅನ್ನು ನಿರ್ಮಿಸಿ ಪ್ರಯಾಣಿಕರು ತಲುಪಲು ವ್ಯವಸ್ಥೆ ಕಲ್ಪಿಸುವ ಉದ್ದೇಶ ಹೊಂದಿದೆ. ರೋಪ್-ವೇ ಒಂದು ಅತ್ಯಂತ ವೇಗ ಹಾಗೂ ಪರಿಸರ ಸ್ನೇಹಿ ಪ್ರಯಾಣ ವ್ಯವಸ್ಥೆಯಾಗಿದ್ದು, ಅತ್ಯಂತ ಕಡಿಮೆ ಅವಧಿಯಲ್ಲಿ ಯಾವುದೇ ಪರಿಸರ ಮಾಲಿನ್ಯ ರಹಿತವಾಗಿ ಗಿರಿಧಾಮದ ವಿಹಂಗಮ ವೈಮಾನಿಕ ನೋಟವನ್ನು ಪ್ರವಾಸಿಗರು ಕಣ್ ತುಂಬಿಕೊಳ್ಳಬಹುದಾಗಿರುತ್ತದೆ. ಇತರೆ ರಾಜ್ಯಗಳಲ್ಲಿ ರೋಪ್-ವೇ ಒಂದು ಪ್ರವಾಸಿ ಆಕರ್ಷಣೆಯಾಗಿದ್ದು, ನಂದಿ ಗಿರಿಧಾಮವು ಸಹ ಅದೇ ರೀತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಬಹುದಾಗಿರುತ್ತದೆ.

ಗಿರಿಧಾಮವನ್ನು ಒಂದು ಪ್ರಮುಖ ಪ್ರವಾಸಿ ತಾಣವನ್ನಾಗಿ ರೂಪಿಸುವ ಅಗತ್ಯತೆಯನ್ನು ಮನಗಂಡಿರುವ ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಇಲಾಖೆಯು (Passenger Ropeway) ಯೋಜನೆಯನ್ನು ನಿರ್ಮಿಸಿ ಕಾರ್ಯರೂಪಕ್ಕೆ ತರಲು Design-Build-Finance-Operate-Transfer (DBFOT) ಮಾದರಿಯಲ್ಲಿ Public Private Partnership ಚೌಕಟ್ಟಿನಲ್ಲಿ 30 ವರ್ಷಗಳ ಅವಧಿಗೆ (18 ತಿಂಗಳು ನಿರ್ಮಾಣ ಅವಧಿಯನ್ನು ಒಳಗೊಂಡಂತೆ) ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ.

ನಂದಿ ಗಿರಿಧಾಮಕ್ಕೆ ರೋಪ್-ವೇ ಯೋಜನೆಯು ನಂದಿ ಬೆಟ್ಟದ ತಪ್ಪಲಿನಿಂದ ಸುಮಾರು 2.93 ಕಿ.ಮೀ ಎತ್ತರದ ಬೆಟ್ಟ ಪ್ರದೇಶಕ್ಕೆ ರೋಪ್ -ವೇ ನಿರ್ಮಿಸಿ ಪ್ರವಾಸಿಗರನ್ನು ಕೊಂಡೊಯ್ಯಲು ಉದ್ದೇಶಿಸಿದ್ದು, ಲ್ಯಾಂಡಿಂಗ್ ಸ್ಟೇಷನ್ (ಇಳಿಯುವ ಪ್ರದೇಶವು) ಬೆಟ್ಟದ ತಳಭಾಗ ಹಾಗೂ ಮೇಲ್ಭಾಗದ ಎರಡೂ ಪ್ರದೇಶಗಳಲ್ಲಿ ಇರುವಂತೆ ಯೋಜಿಸಲಾಗಿದೆ. ಒಟ್ಟು 18 ಟವರ್ ಗಳನ್ನಾಗಿ ಹೊಂದಿರುವ ಈ ಯೋಜನೆಯು ಇತರ ಪ್ರವಾಸಿ ಸೌಕರ್ಯಗಳಾದ ವಾಣಿಜ್ಯ ಮಳಿಗೆ ರಸ್ಟೋರೆಂಟ್, ಕೆಫೆ, ಫುಡ್ ಕೋರ್ಟ್, ಇತರೆ ಅಗತ್ಯ ಅಂಗಡಿ ಮಳಿಗೆಗಳನ್ನು ಹೊಂದಿರುತ್ತದೆ.

ಈ ಯೋಜನೆಯು ಡೆವಲಪರ್ ನ ಕಾರ್ಯವ್ಯಾಪ್ತಿಯು ಕರಡು ರಿಯಾಯಿತಿ ಕರಾರಿನಲ್ಲಿ ವಿಧಿಸುವ ನಿಯಮಗಳು ಮತ್ತು ಷರತ್ತುಗಳನ್ವಯ ರಿಯಾಯಿತಿ ಅವಧಿಯಲ್ಲಿ ಯೋಜನೆಯ ವಿನ್ಯಾಸ, ಇಂಜಿನಿಯರಿಂಗ್, ಹಣಕಾಸು ಸಂಗ್ರಹಣೆ ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಒಳಗೊಂಡಂತೆ ಯೋಜನೆಯ ಅಭಿವೃದ್ಧಿಯನ್ನು ನಿರ್ವಹಿಸುವುದು.

ಕರ್ನಾಟಕ ಸರ್ಕಾರವು ನಂದಿ ಬೆಟ್ಟವನ್ನು ತಪ್ಪಲಿನಿಂದ ಸಂಪರ್ಕಿಸಲು ಉದ್ದೇಶಿಸಿದೆ, ಇದರಿಂದಾಗಿ ಪ್ರವಾಸಿಗರು ಬೆಟ್ಟವನ್ನು ತಲುಪಲು ರೋಪ್‌ವೇ ಅನ್ನು ಬಳಸಬಹುದು. ರೋಪ್‌ವೇಯಂತಹ ವೇಗದ ಮತ್ತು ಪರಿಸರ ಸ್ನೇಹಿ ಸಾರಿಗೆ ಸೌಲಭ್ಯವು ನಂದಿ ಬೆಟ್ಟಗಳನ್ನು ತಲುಪಲು ಸಮಯವನ್ನು ಉಳಿಸುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶದ ವೈಮಾನಿಕ ನೋಟವನ್ನು ನೀಡುವುದರ ಜೊತೆಗೆ ಪ್ರದೇಶದಲ್ಲಿ ಮಾಲಿನ್ಯವನ್ನು ಕಡಿಮೆ ಮಾಡುತ್ತದೆ. ರೋಪ್‌ವೇ ಅಭಿವೃದ್ಧಿಯು ಸಂಪರ್ಕವನ್ನು ಸುಧಾರಿಸುವುದಲ್ಲದೆ, ಯೋಜನೆಯನ್ನು ಪರಿಣಾಮಕಾರಿಯಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ನಂದಿ ಬೆಟ್ಟಕ್ಕೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುತ್ತದೆ, ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಚೌಕಟ್ಟಿನಡಿಯಲ್ಲಿ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ.

*********